# ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ .

## ಸಿ.ಸಿ ನಂಃ 967/2019

| | | |
|---|---|---|
| ಸಾಕ್ಷಿಯ ಹೆಸರಃ | ಮಹ್ಮದ ಸುಬಾನಿ | ಪ್ರಾಸಾಃ **03** |
| ತಂದೆ/ಗಂಡನ ಹೆಸರುಃ | ರಾಜೆಸಾಬ | ಚಾಸಾಃ **05** |
| ವಯಸ್ಸುಃ | **41** ವರ್ಷ | ದಿಃ **25.02.2025.** |
| ಉದ್ಯೋಗಃ | ಅಬಕಾರಿ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಾಪೂರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2014 ರಿಂದ ಇಲ್ಲಿಯರವರೆಗೆ ಶಹಾಪೂರ ಅಬಕಾರಿ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 20.03.2019 ರಂದು ಮಃ 12.00 ಗಂಟೆಗೆ ನಾನು ಮತ್ತು ಚಾಸಾ.1, 4 ರವರ ಸೇರಿಕೊಂಡ ನಮ್ಮ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.1 ರವರಿಗೆ ಒಬ್ಬ ವ್ಯಕ್ತಿಯು ಶಿರವಾಳ ಗ್ರಾಮದಿಂದ ಅಣಬಿ ಕಡೆಗೆ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯವನ್ನು ಸಾಗಾಣಿಕೆ ಮಾಡುವ ಕುರಿತು ಖಚಿತ ಬಾತ್ಮಿ ಬಂದಿರುತ್ತದೆ. ಸದರಿ ಬಾತ್ಮಿಯ ಬಗ್ಗೆ ಚಾಸಾ 1 ರವರು ನನಗೆ ಮತ್ತು ಚಾಸಾ 4 ರವರಿಗೆ ತಿಳಿಸಿರುತ್ತಾರೆ. ನಂತರ ನಾನು ಚಾಸಾ.1 ಮತ್ತು 4 ರವರ ಸೇರಿಕೊಂಡು ಶಿರವಾಳ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಚಾಸಾ.2 ಮತ್ತು 3 ರವರನ್ನು ಪರಿಚಯ ಮಾಡಿಕೊಂಡು ಸದರಿ ಪ್ರಕರಣದಲ್ಲಿ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಪಂಚರು ಹಾಗೂ ಚಾಸಾ,1 ಮತ್ತು 4 ಹಾಗೂ ನಾನು ಎಲ್ಲರೂ ಸೇರಿಕೊಂಡು ಮುಡಬೋಳ ಕ್ರಾಸ್ ಹತ್ತಿರ ವಾಹನಕ್ಕಾಗಿ ಕಾಯುತ್ತಾ ನಿಂತಾಗ ನಮ್ಮ ಎದುರುಗಡೆಯಿಂದ ಕೆಂಪು ಬಣ್ಣದ ಒಂದು ದ್ವಿಚಕ್ರ ವಾಹನ ಬರುತ್ತಿರುವುದು ಕಂಡು ಬಂದಿದು ನಾವು ಸದರಿ ವಾಹನವನ್ನು ನಿಲ್ಲಿಸುವಂತೆ ಕೈ ಮಾಡಿದಾಗ ಆ ವ್ಯಕ್ತಿಯು ನಮ್ಮನ್ನು ನೋಡಿ ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತಾನೆ. ನಮಗೆ ಅನುಮಾನ ಬಂದು ವಾಹನದ ಹತ್ತಿರ ಹೋಗಿ ಚಾಸಾ.1 ರವರು ಚಾಸಾ.2 ಮತ್ತು 3 ರವರ ಸಮಕ್ಷಮ

ಘಟನಾ ಸ್ಥಳದಲ್ಲಿ ಶೋಧನಾ ಪತ್ರವನ್ನು ತಯಾರಿಸಿ ವಾಹನವನ್ನು ಪರಿಶೀಲನೆ ಮಾಡಿದಾಗ ಅದು ಕೆಂಪು ಬಣ್ಣದ ಯಮಹಾ ಜಿ.ಎಸ್ ಕೆಎ -32-ಡಬ್ಲ್ಯೂ 5474 ಕಂಡುಬಂದಿದ್ದು ನಂತರ ದ್ವಿಚಕ್ರ ವಾಹನದ ಹಿಂದಿನ ಸೀಟಿನ ಮೇಲೆ ಒಂದು ಬಿಳಿ ಪ್ಲಾಸ್ಟಿಕ ಚೀಲ ಕಂಡು ಬಂದಿದ್ದು ಅದರಲ್ಲಿ 90 ಎಂ.ಎಲ್ ನ ಒ.ಸಿ. 192 ಟೆಟ್ರಾ ಪಾಕೆಟಗಳು ಕಂಡು ಬಂದಿದ್ದು ಆರೋಪಿತನನ್ನು ಸದರಿ ಟೆಟ್ರಾ ಪಾಕೆಟಗಳನ್ನು ಸಾಗಾಣಿಕೆ ಮಾಡಲು ಯಾವುದಾದರು ಪರವಾನಿಗೆ ಇದೆ ಎಂದು ಕೇಳಿದಾಗ ಆರೋಪಿತನು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲದೇ ಇರುವುದು ತಿಳಿಸಿರುತ್ತಾನೆ. ನಂತರ ಚಾಸಾ.1 ರವರು ಸ್ಥಳದಲ್ಲಿದ್ದ ಎಲ್ಲ ಟೆಟ್ರಾ ಪಾಕೆಟಗಳನ್ನು ಜಪ್ತಿ ಪಡಿಸಿಕೊಂಡು ಅದರಲ್ಲಿ ರಾಸಾಯನಿಕ ಪರಿಕ್ಷೆಗಾಗಿ 26 ಟೆಟ್ರಾ ಪಾಕೆಟಗಳನ್ನು ತೆಗೆದುಕೊಂಡು ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗ ಸೀಲ 630 ರಿಂದ ಮುದ್ರೆ ಹಾಕಿ ಚಾಸಾ.1 ಮತ್ತು ಪಂಚರ ಸಮಕ್ಷಮ ಮಾದರಿ ಮುದ್ರೆಯನ್ನು ತಯಾರಿಸಿ ತಮ್ಮ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಪಂಚನಾಮೆಯನ್ನು ಮಃ 01.30 ರಿಂದ 02.30 ರವರೆಗೆ ತಯಾರಿಸಿರುತ್ತಾರೆ. ನಂತರ ಸ್ಥಳದಲ್ಲಿಯೇ ಇದ್ದ ಆರೋಪಿತನನ್ನು ಕಾನೂನು ನಿಯಮಗಳನ್ನು ಪಾಲಿಸಿ ದಸ್ತಗಿರಿ ಮಾಡಿ ಮುದ್ದೆಮಾಲುಗಳೊಂದಿಗೆ ಹಾಗೂ ಜಪ್ತಿ ಪಡಿಸಿಕೊಂಡು ಮು. ಮಾಲು ಹಾಗೂ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಠಾಣೆಗೆ ಬಂದಿರುತ್ತೇವೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅಪರಾಧದಲ್ಲಿ ಭಾಗಿಯಾಗಿರುವ ಆರೋಪಿಯು ಒಂದೇ ಆಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಯು.ಬಿ.ಎಂ. ವಕೀಲರಿಂದಃ**

ನಾನು ಮತ್ತು ಚಾಸಾ.1 ಮತ್ತು 4 ರವರ ಸೇರಿಕೊಂಡು ಶಹಾಪೂರದಿಂದ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೆವೆ. ಚಾಸಾ.1 ರವರಿಗೆ ಮಃ 12.00 ಗಂಟೆ ಸುಮಾರಿಗೆ ಮದ್ನಾಳ ಗ್ರಾಮದ ಹತ್ತಿರ ಇದ್ದಾಗ ಬಾತ್ಮಿ ಬಂದಿರುತ್ತದೆ. ಪಂಚರು ಹೋಟೆಲ್ ಮುಂಬಾಗದಲ್ಲಿ ನಿಂತಿದ್ದರು. ಘಟನಾ ಸ್ಥಳಕ್ಕೆ ಮಃ 12.15 ರ ಸುಮಾರಿಗೆ ಹೋಗಿರುತ್ತೆವೆ. ಪಂಚನಾಮೆಯನ್ನು ಮಃ 01.30 ರಿಂದ 02.30 ರವರೆಗೆ ಮಾಡಿರುತ್ತೆವೆ. ಪಂಚರಿಗೆ ಬೇಟಿಯಾದಾಗ ಶೋದನಾ

ಪತ್ರವನ್ನು ತಯಾರಿಸಿರುತ್ತೆವೆ. ಆರೋಪಿತನನ್ನು ಹಿಡಿಯುವ ಮೊದಲೇ ಶೋದನಾ ಪತ್ರವನ್ನು ತಯಾರಿಸಿರುತ್ತೆವೆ. ಆರೋಪಿತನು ಅಣಬಿ ಕಡೆಯಿಂದ ಬಂದಿರುತ್ತಾನೆ. ಆರೋಪಿತನು ಬರುವುದನ್ನು ಸ್ವಲ್ಪ ಹತ್ತಿರದಿಂದ ನೋಡಿರುತ್ತೆವೆ. ಪ್ಲ್ಯಾಸ್ಟಿಕ್ ಚೀಲ ಮತ್ತು ಮು.ಮಾಲುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೆವೆ. ಪ್ಲಾಸ್ಟಿಕ ಚೀಲದ ಮೇಲೆ ಯಾವುದೇ ಹೆಸರು ಇರುವುದಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿಯು ಪೂರ್ವಕ್ಕೆ - ಶಿವಪುತ್ರ ರವರ ಜಮೀನು, ದಕ್ಷಿಣಕ್ಕೆ - ಅಣಬಿ- ಶಿರವಾಳ ರಸ್ತೆ, ಉತ್ತರಕ್ಕೆ - ಶಿರವಾಳ ಅಣಬಿ ರಸ್ತೆ, ಪಶ್ಚಿಮಕ್ಕೆ - ಮುಡಬೋಳ ಕ್ರಾಸ್ ಇರುತ್ತದೆ. ನಾನು ಮತ್ತು ನಮ್ಮ ಸಿಬ್ಬಂದಿಗಳು ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ.**